# ನಿವೇದಿತಾ ರಚಿತ 'ರಿಲಿಜನ್ ಮತ್ತು ಧರ್ಮ'


ಸ್ವಾಮಿ ವೀರೇಶಾನಂದ

ಭಾರತೀಯ ಧರ್ಮ, ಸಂಸ್ಕೃತಿಗಳನ್ನು ಸ್ವೀಕರಿಸುವ ಮುನ್ನ ಸಾಕಷ್ಟು ಹೋರಾಟ, ಚಿಂತನೆಗಳನ್ನು ಮಾಡಿ ಅದರ ಆಳ-ಅಗಲಗಳನ್ನು ಅರಿತುಕೊಂಡ ನಿವೇದಿತಾ, ಈ ಹಿನ್ನೆಲೆಯಲ್ಲಿ ರಚಿಸಿದ ಕೃತಿಯೇ 'Religion and Dharma'. ಈ ಕುರಿತು ಬರೆದಿರುವ ಪೂಜ್ಯ ಸ್ವಾಮೀಜಿಯವರು '**ವಿವೇಕಪ್ರಭ**'ದ ಹಿಂದಿನ ಸಂಪಾದಕರಾಗಿದ್ದರು. ಉತ್ತಮ ವಾಗ್ಮಿಗಳೂ, ಸಂಸ್ಕೃತ ವಿದ್ವಾಂಸರೂ ಆಗಿರುವ ಅವರು ಪ್ರಸ್ತುತ ಬೇಲೂರು ಮಠದಲ್ಲಿರುವ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಭಗಿನಿ ನಿವೇದಿತಾ ಭಾರತದ ನವೋತ್ಥಾನದ ಹರಿಕಾರರಲ್ಲಿ ಅಗ್ರಗಣ್ಯರು. ಭಾರತದ ಸ್ವಾತಂತ್ರ್ಯಕ್ಕಾಗಿ ದುಡಿದ ಹಲವಾರು ಗಣ್ಯರಿಗೆ ನಿವೇದಿತಾ ಪ್ರೇರಕಶಕ್ತಿಯಾಗಿದ್ದರು. ಹಾಗೆಯೇ ಸಾಮಾಜಿಕ ಪರಿವರ್ತನೆ ಮತ್ತು ಶೈಕ್ಷಣಿಕ ಆಂದೋಲನದಲ್ಲಿ ಅವರದು ಅಗಾಧ ಪ್ರಯತ್ನ. ಅಲ್ಲದೆ ಸಾಹಿತ್ಯಕ್ಷೇತ್ರದಲ್ಲಿಯೂ ಅವರು ಘನ ಕೊಡುಗೆಯನ್ನು ನೀಡಿದ್ದಾರೆ. ಒಟ್ಟಿನಲ್ಲಿ ಸಾವಿರಾರು ಕಿಲೋಮೀಟರುಗಳಿಂದ ಬಂದ ಈ ಮಹಿಳೆಯನ್ನು ಭಾರತೀಯರು 'ಲೋಕಮಾತೆ'ಯೆಂದು ಗೌರವಿಸುತ್ತಿದ್ದಾರೆ. ಇದೊಂದು ದೊಡ್ಡ ಸೋಜಿಗವೇ ಸರಿ.

ನಿವೇದಿತಾ ಬರೆದ ಹಲವಾರು ಆಂಗ್ಲ ಕೃತಿಗಳಲ್ಲಿ 'ರಿಲಿಜನ್ ಮತ್ತು ಧರ್ಮ' ಎಂಬ ಗ್ರಂಥವೂ ಒಂದು. ಸಣ್ಣ ಪುಸ್ತಕವಾದರೂ, ಐತಿಹಾಸಿಕವಾಗಿ ಮತ್ತು ಮೌಲಿಕವಾಗಿ ಬಹಳ ಮಹತ್ವದ ಪುಸ್ತಕ. ಪಾಶ್ಚಾತ್ಯ ಕಲ್ಪನೆಯಾದ 'ರಿಲಿಜನ್' ಪದಕ್ಕೆ 'ಧರ್ಮ' ಎಂಬ ಭಾರತೀಯ ಪದವು ಸಮಾನಾಂತರವಾಗದು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅದನ್ನು ನಿರ್ದುಷ್ಟವಾಗಿ ಈ ಪುಸ್ತಕದಲ್ಲಿ ವಿಶ್ಲೇಷಿಸಲಾಗಿದೆ. ಇದಲ್ಲದೆ, ಧರ್ಮದ ವ್ಯಾಪಕ ಅರ್ಥಕ್ಕೆ ಪೂರಕವಾಗಿ ಸಮಾಜ, ಶಿಕ್ಷಣ, ವ್ಯಕ್ತಿತ್ವ ವಿಕಾಸ ಮೊದಲಾದ ಹತ್ತು ಹಲವು ವಿಷಯಗಳನ್ನು ಸಣ್ಣ ಸಣ್ಣ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಒಟ್ಟಾರೆ ಹಿಂದೂ ಧರ್ಮವು ಇಡೀ ಜೀವನದ ಸರ್ವಾಂಗ ಪ್ರಗತಿಯ ಸಂಕೇತವಾಗಿದೆ ಎನ್ನುವುದನ್ನು ಎತ್ತಿತೋರಿಸುವ ಬಹಳ ಉತ್ತಮ ಕೈಪಿಡಿಯಿದು ಎಂದು ಹೇಳಬಹುದು. ಪಾಶ್ಚಾತ್ಯ ಧರ್ಮಗಳು ಮತ್ತು ಹಿಂದೂ ಧರ್ಮ – ಇವರೆಡರ ನಡುವೆ ಇರುವ ಮೂಲಭೂತ ವ್ಯತ್ಯಾಸವನ್ನು ಇಲ್ಲಿ ಎಳೆಎಳೆಯಾಗಿ ಬಿಚ್ಚಿಡಲಾಗಿದೆ. ಆ ಮೂಲಕ ಭಾರತೀಯ ಸಂಸ್ಕೃತಿ ಮತ್ತು ಧರ್ಮಗಳ ವಿಶ್ವವ್ಯಾಪಕತೆ, ಉದಾರತೆ ಮತ್ತು ಔನ್ನತ್ಯಗಳನ್ನು ಇಲ್ಲಿ ಸಾಕ್ಷ್ಯಾಧಾರಗಳ ಮೂಲಕ ಪರಿಚಯ ಮಾಡಿಕೊಡಲಾಗಿದೆ.

**ಹಿಂದೂ ಧರ್ಮದ ವೈಶಿಷ್ಟ್ಯ:** ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಆಯಾ ಮತಗಳ ಪ್ರವಾದಿಗಳ ಪ್ರಭಾವಶಾಲಿ ವ್ಯಕ್ತಿತ್ವದ ಮೇಲೆ ಸಂಪೂರ್ಣವಾಗಿ ನಿರ್ಭರವಾಗಿವೆ. ಆದರೆ ಹಿಂದೂಧರ್ಮವು ಸನಾತನ ಸತ್ಯಗಳ ಅಡಿಪಾಯದ ಮೇಲೆ ನಿಂತಿದೆ. ಹಿಂದೂಧರ್ಮದ ಧ್ಯೇಯ ವೈರಾಗ್ಯ ಮತ್ತು ಮುಕ್ತಿಯ ಪರಾಕಾಷ್ಠತೆಯನ್ನು ಮುಟ್ಟುವುದೇ ಆಗಿದೆ. ಹಾಗೆಯೇ ಈ ಧರ್ಮವು ಎಲ್ಲವನ್ನು ಒಳಗೊಳ್ಳುವ




ವಿಶಿಷ್ಟ ಗುಣವನ್ನು ಹೊಂದಿದೆ. ಈ ನಾಗರಿಕತೆಯು ಎಲ್ಲ ರೀತಿಯ ಪ್ರತಿರೋಧವನ್ನೂ ತಡೆದುಕೊಳ್ಳುವ ಅಪಾರ ಶಕ್ತಿಯನ್ನು ಹೊಂದಿದೆ. ಇವೆರಡೂ ಕೂಡಿರುವುದರಿಂದಲೇ ಹಿಂದೂಧರ್ಮವು ಸಾವಿರಾರು ವರ್ಷಗಳ ಕಾಲ ನಿರಂತರ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಇಂದಿಗೂ ಹಿಂದೂಧರ್ಮವು ಆಧುನಿಕ ಜಗತ್ತಿನ ಆವಶ್ಯಕತೆಗಳಿಗೆ ಸ್ಪಂದಿಸುತ್ತಿದೆ. ಅದಕ್ಕಾಗಿ ಬೇಕಾದ ಆಂತರಿಕ ಮಾರ್ಪಾಡುಗಳನ್ನು ಮಾಡಿಕೊಂಡಿದೆ. ತನ್ನ ಬಾಹ್ಯಾಚರಣೆಗಳಲ್ಲಿ, ಅಭಿವ್ಯಕ್ತಿಗಳಲ್ಲಿ ಅನೇಕ ಸುಧಾರಣೆಗಳನ್ನು ಕಂಡಿದೆ.

ಹಿಂದೂಧರ್ಮದ ಅನೇಕ ವೈಶಿಷ್ಟ್ಯಗಳಲ್ಲಿ ಪ್ರಮುಖವಾದುದು ಅದರ ಮುಕ್ತಿಯ ಕಲ್ಪನೆ. ಮುಕ್ತಿ ಎಂದರೆ ಸ್ವಾತಂತ್ರ್ಯ. ಬಾಳಿನ

ನಮ್ಮೆಲ್ಲ ಸಂಘರ್ಷಗಳೂ ಸ್ವಾತಂತ್ರ್ಯಕ್ಕಾಗಿಯೇ. ಮಹಾತ್ಮರು ಸ್ವಾತಂತ್ರ್ಯವು ತಮ್ಮ ಜನ್ಮಸಿದ್ಧ ಹಕ್ಕು ಎಂಬ ಪರಮ ವಿಶ್ವಾಸದಿಂದ ಮುಂದುವರಿಯುತ್ತಾರೆ. ಅವರ ವ್ಯಕ್ತಿತ್ವದಲ್ಲಿ ದಾನಬುದ್ಧಿ ಮತ್ತು ನಿಃಸ್ವಾರ್ಥತೆಗಳು ತುಂಬಿ ತುಳುಕಾಡುತ್ತಿರುತ್ತವೆ. ಅಂಥವರು ಜೀವನದಲ್ಲಿ ತಾವು ಪಡೆದುಕೊಳ್ಳುವ ಪ್ರತಿಯೊಂದು ಸೇವಾ ಅವಕಾಶವನ್ನು ಕೂಡ ಉಪಯೋಗಿಸಿಕೊಳ್ಳುತ್ತಾರೆ. ಜೀವನದ ಪರಮ ಪುರುಷಾರ್ಥವೇ ಮುಕ್ತಿ.

ಹಿಂದೂಧರ್ಮದ ಇನ್ನೊಂದು ವೈಶಿಷ್ಟ್ಯವೆಂದರೆ ಆಚರಣೆಗಳು. ಈ ಆಚರಣೆಗಳು ಎಂದೂ ನಿಂತ ನೀರಾಗಿರಲಿಲ್ಲ. ಅವು ಕಾಲ ಕಾಲಕ್ಕೆ ಮಾರ್ಪಡುತ್ತಲೇ ಇರುತ್ತಿದ್ದವು; ಕಾಲಮಾನಕ್ಕೆ ತಕ್ಕಂತೆ ಹೊಸ ಹೊಸ ಆವಿಷ್ಕಾರಗಳನ್ನು ತಮ್ಮೊಳಗೆ ಅಡಗಿಸಿಕೊಳ್ಳುತ್ತ ಹೋದವು. ಈ ಆಚರಣೆಗಳ ಮಹತ್ವವನ್ನು ಅರಿತು ಅವುಗಳಿಗೆ ಹೊಸ ಚೇತನವನ್ನು ತುಂಬುವ ಕಾಲ ಈಗ ಒದಗಿಬಂದಿದೆ. ಪ್ರತಿಯೊಂದು ಧರ್ಮಕ್ಕೂ ಸಾಮುದಾಯಿಕ ಆಯಾಮ ಇರುತ್ತದೆ. ಸಮುದಾಯದ ಆವಶ್ಯಕತೆಗಳನ್ನು ಈ ಬಗೆಯ ಆಚರಣೆಗಳು ಪೂರೈಸುತ್ತವೆ.

ಹಿಂದೂಧರ್ಮದ ಶಿಖರಪ್ರಾಯವಾದ ವಿಚಾರವೊಂದಿದೆ. ಅದೆಂದರೆ, ಹಿಂದೂಧರ್ಮವು ಯಾವತ್ತೂ ಪೌರಾಣಿಕ ಗಾಥೆಗಳ ಮೇಲೆ ನಿರ್ಭರವಾಗದೆ, ಸನಾತನ ನಿತ್ಯಸತ್ಯಗಳನ್ನೇ ತನ್ನ ಜೀವಸತ್ವವಾಗಿ ಇರಿಸಿಕೊಂಡಿದೆ. ಇತರ ಧರ್ಮಗಳು ವ್ಯಕ್ತಿಗಳ ಮೇಲೆ ಆಧರಿಸಿದ್ದರೆ, ಹಿಂದೂಧರ್ಮವು ಸತ್ಯತತ್ತ್ವದ ಆಧಾರದ ಮೇಲೆ ನಿಂತಿದೆ. ಹಾಗೆಯೇ ಈ ಧರ್ಮದ ಅನುಯಾಯಿಗಳು ಎಂದಿಗೂ ಯಾರ ಮೇಲೆಯೂ ದೌರ್ಜನ್ಯವನ್ನು ಎಸಗಿಲ್ಲ. ನಿತ್ಯಸತ್ಯವನ್ನು ಪ್ರಾಮಾಣಿಕವಾಗಿ ಮತ್ತು ನಿಸ್ಪೃಹವಾಗಿ ಅನ್ವೇಷಿಸುವುದೇ ಜೀವನದ ಉದ್ದೇಶವೆಂದು ಹಿಂದೂಧರ್ಮವು ಪ್ರತಿಪಾದಿಸುತ್ತದೆ. ಇದೇ ಸಮಯದಲ್ಲಿ, ಜಗತ್ತಿನ ಎಲ್ಲ ಮತಗಳ ವಿಚಾರಗಳೂ ಆ ಸತ್ಯದ ವಿವಿಧ ಆಯಾಮಗಳೆಂದು ಪೂಜಿಸಿ ಗೌರವಿಸುವ ಒಂದೇ ಧರ್ಮ ಹಿಂದೂಧರ್ಮ.

**ಧೀರೋದಾತ್ತ ಹಿಂದೂ ಧರ್ಮ :** ಹಿಂದೂಧರ್ಮವು ತನ್ನದೇ ಆದ ಜೀವಂತ ವ್ಯವಸ್ಥೆಗಳನ್ನು ಒಳಗೊಂಡಿದೆ. ಯಾಂತ್ರಿಕ ರೀತಿಯ ಸಂಸ್ಥೆಗಳಿಗೆ ಇಲ್ಲಿ ಅವಕಾಶವಿಲ್ಲ. ಅದಕ್ಕೆ ಬದಲಾಗಿ ಒಂದು ಹೆಮ್ಮರವು ತನಗೆ ತಾನೇ ಬೆಳೆಯುವಂತೆ ಸಹಜವಾಗಿ ಬೆಳೆದುಕೊಂಡಿರುವ ಅನೇಕ ವ್ಯವಸ್ಥೆಗಳು, ಕಟ್ಟುಪಾಡುಗಳು ಮತ್ತು ಧೋರಣೆಗಳನ್ನು ಹಿಂದೂ ಧರ್ಮದಲ್ಲಿ ಕಾಣಬಹುದು. ಆದರೆ ಹಿಂದೂಗಳು ಬಹಳ ಮೃದು ಸ್ವಭಾವದವರು. ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳಬೇಕು ಎನ್ನುವ ಸಂಘಟನಾತ್ಮಕ ಪ್ರಯತ್ನ ಅವರಲ್ಲಿ ಕಾಣಬರುವುದಿಲ್ಲ. ಅದಕ್ಕಾಗಿಯೇ ಸ್ವಾಮಿ ವಿವೇಕಾನಂದರು 'ಧೀರೋದಾತ್ತ ಹಿಂದೂ ಧರ್ಮ'ವನ್ನು ಪ್ರತಿಪಾದಿಸಿದರು. ನಾವು ನಮ್ಮ ಧರ್ಮವನ್ನು ಹೆಚ್ಚು ಹೆಚ್ಚು ಉತ್ಸಾಹದಿಂದ ಪ್ರಸಾರಮಾಡಬೇಕು; ಅದಕ್ಕಾಗಿ ಜಗತ್ತಿನ ಎಲ್ಲೆಡೆ ಸಂದೇಶವಾಹಕರನ್ನು ಕಳಿಸಿಕೊಡಬೇಕು. ಇದು ನಮ್ಮ ಕಾರ್ಯದ ಒಂದು ಆಯಾಮವಷ್ಟೇ. ಇನ್ನೊಂದು ಆಯಾಮವೆಂದರೆ ನಮ್ಮ ರೀತಿನೀತಿಗಳನ್ನು ಉತ್ತಮಪಡಿಸಿಕೊಳ್ಳುವುದು; ನಮ್ಮ ಧೋರಣೆಗಳಲ್ಲಿ, ಆಚರಣೆಗಳಲ್ಲಿ ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸುವುದು. ವ್ಯಷ್ಟಿಯ ಉದ್ಧಾರದ ಮೂಲಕ ಸಮಷ್ಟಿಯ ಉದ್ಧಾರವೇ ನಮ್ಮ ಧ್ಯೇಯವಾಗಬೇಕು. ಹಾಗಾದರೆ ಮಾತ್ರ ವ್ಯಕ್ತಿ ಮತ್ತು ಸಮಾಜ ಇವೆರಡರ ಒಳಿತನ್ನು ಸಾಧಿಸಲು ಸಾಧ್ಯ.

ಇದಕ್ಕಾಗಿ ನಮ್ಮಲ್ಲಿ ಅವಶ್ಯಕತೆ ಇರುವುದು ಪರಸ್ಪರ ಸಹಕಾರದ ಭಾವನೆ. ನಮ್ಮ ಜನಮಾನಸದಲ್ಲಿ ಧರ್ಮ ಮತ್ತು ಆಧ್ಯಾತ್ಮಿಕ ಭಾವನೆಗಳು ಬೇರೂರಿ ನಿಂತಿವೆ. ಸಾಮಾನ್ಯ ಮನುಷ್ಯನೂ ತನ್ನ ಅಂತರಾಳದಲ್ಲಿ ಅದನ್ನು ಅಡಗಿಸಿಕೊಂಡಿದ್ದಾನೆ. ಇದನ್ನು ನಾವು ಗುರುತಿಸಿ ಗೌರವಿಸಬೇಕು. ತಮ್ಮನ್ನು ತಾವೇ ಉದ್ಧರಿಸಿಕೊಳ್ಳುವಂತೆ ಜನರಿಗೆ ಸಹಾಯ ಮಾಡುವುದು ಹೇಗೆ? ನಮ್ಮ ಜನರಿಗೆ ನಾವು ಹೇಗೆ ತಾನೇ ಸಹಾಯ ಮಾಡಬಲ್ಲೆವು? – ಇದನ್ನು ನಾವು ಗಂಭೀರವಾಗಿ ಆಲೋಚಿಸಬೇಕು. ಅದರಲ್ಲೂ ಯುವಕರು, ವಿದ್ಯಾರ್ಥಿಗಳು ಸುತ್ತಲಿನ ಸಮಾಜದ ಪರಿಸ್ಥಿತಿಯನ್ನು ಮನಗಂಡು ಸೇವಾತತ್ಪರರಾಗಬೇಕು.

**ಮತ ಮತ್ತು ಸಮಾಜ :** ಮತಗಳು ಉಂಟುಮಾಡಿರುವ ಕೆಡುಕಿನ ಬಗ್ಗೆ ಬಹಳ ಜನರು ಮಾತನಾಡುತ್ತಾರೆ. ಆದರೆ ಮತಗಳು ಇಡೀ ಮಾನವ ಜನಾಂಗಕ್ಕೆ ಒಳಿತನ್ನು ಕೂಡ ಬೇಕಾದಷ್ಟು ಮಾಡಿವೆ ಎನ್ನುವ ತಥ್ಯವನ್ನು ನಾವು ನೆನಪಿನಲ್ಲಿಡಬೇಕು. ಒಂದು ಸಾಮಾನ್ಯ ತತ್ತ್ವವನ್ನು ಕೇಂದ್ರವಾಗಿಟ್ಟುಕೊಂಡು ಒಂದು ಧಾರ್ಮಿಕ ಸಂಸ್ಥೆ ಅಥವಾ ಮತವು, ಅದರ ಸುತ್ತಲೂ ಬೆಳೆಯುತ್ತ ಹೋಗುತ್ತದೆ. ಇದರಿಂದ ಕಷ್ಟದಲ್ಲಿರುವ, ಬಡತನದಲ್ಲಿ ನರಳುತ್ತಿರುವ ಜನರಿಗೆ ಎಷ್ಟೋ ಸಾಂತ್ವನ ಮತ್ತು ಬೆಂಬಲ ದೊರಕುತ್ತದೆ. ಮತಗಳು ಒಂದು ವಿದ್ಯಾಲಯದಂತೆ ಕೂಡ ಕಾರ್ಯವೆಸಗಬಲ್ಲವು. ಸಂಪ್ರದಾಯಕ್ಕೆ ಸೇರಿದ ಜನರು ಮಕ್ಕಳು ತಮ್ಮ ಸಂಸ್ಕಾರಗಳನ್ನು ಮತೀಯ ಆಚರಣೆ ಮತ್ತು ಕಟ್ಟುಪಾಡುಗಳಿಂದಲೇ ಪಡೆದುಕೊಳ್ಳುತ್ತಾರೆ. ಈ ಸಂಸ್ಕಾರಗಳು ಅವರ ಮುಂದಿನ ಬಾಳಿನ ದಾರಿದೀಪವಾಗುತ್ತವೆ. ಹಾಗೆಯೇ ಮತವು ಅದರ ಅನುಯಾಯಿಗಳಲ್ಲಿ ಸಹೋದರ ಭಾವನೆಯನ್ನು ಬೆಳೆಸುತ್ತದೆ. ಒಂದು ದೊಡ್ಡ ಕುಟುಂಬದ ಹಾಗೆ ಅದು ತನ್ನ ಅನುಯಾಯಿಗಳನ್ನು ಪೋಷಿಸುತ್ತದೆ.

ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಲ್ಲಿ ದೊಡ್ಡ ದೊಡ್ಡ ಗುಂಪುಗಳಲ್ಲಿ ಪ್ರಾರ್ಥನೆ ಮಾಡುವುದನ್ನು ನೋಡುತ್ತೇವೆ. ಈ ಬಗೆಯ ಪ್ರಾರ್ಥನಾ ಸಭೆಗಳೇ ಈ ಮತಗಳಿಗೆ ಮುಖ್ಯವಾಗುತ್ತವೆ. ಹಿಂದೂ ಧರ್ಮದಲ್ಲಿ ಈ ಬಗೆಯ ಪ್ರಾರ್ಥನಾ ಸಭೆಗಳ ಕಲ್ಪನೆಯು ಅಷ್ಟಾಗಿ ವಿಕಾಸಗೊಳ್ಳಲಿಲ್ಲ ಎಂದೇ ಹೇಳಬೇಕು. ದೇವತಾಮೂರ್ತಿಯನ್ನು ಉಪಾಸನೆ ಮಾಡುತ್ತಿರುವ ಒಬ್ಬ ಪುರೋಹಿತ ಮತ್ತು ಭಕ್ತಿಭಾವದಿಂದ ಧ್ಯಾನಿಸುತ್ತಿರುವ ಸಾಧಕ – ಈ ಮಟ್ಟಕ್ಕೆ ಮಾತ್ರ ಹಿಂದೂ ಧರ್ಮದ ಆಚರಣೆಯು ಸೀಮಿತಗೊಂಡಿದೆ ಎಂದು ಹೇಳಬಹುದು. ಹೀಗೆ ವೈಯಕ್ತಿಕ ಸಾಧನೆಯನ್ನು ಮಾಡಿ ಋಷಿ, ಮುನಿಗಳಾಗುವ ಪ್ರಕ್ರಿಯೆಯನ್ನು ನಾವು ನೋಡುವುದು ಹಿಂದೂಧರ್ಮದಲ್ಲಿ ಮಾತ್ರ. ಭಾರತದಲ್ಲಿ ಒಬ್ಬ ರೈತನು ಕೂಡ, ಯುರೋಪಿನ

